# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :1155 |
| ಉತ್ತರಿಸಬೇಕಾದ ದಿನಾಂಕ | : 19.12.2024 |
| ಸದಸ್ಯರ ಹೆಸರು | : ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ನಗರ ನಿರ್ಮಿಸುವ ಯೋಜನೆಯು ನೆನಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕ್ರೀಡಾ ನಗರಕ್ಕೆ ಅವಶ್ಯಕವಿರುವ ಜಮೀನು ಮತ್ತು ಅಗತ್ಯ ಅನುದಾನವನ್ನು ಯುವಜನ ಮತ್ತು ಕ್ರೀಡಾ ಇಲಾಖೆಗೆ ಒದಗಿಸಲಾಗಿದೆಯೇ (ಸಂಪೂರ್ಣ ಮಾಹಿತಿ ನೀಡುವುದು) | 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ – 363 ರಲ್ಲಿ ಬೆಂಗಳೂರಿನ ಉತ್ತರ ತಾಲ್ಲೂಕಿನಲ್ಲಿ ಲಭ್ಯವಿರುವ ಅಂದಾಜು 70 ಎಕರೆ ನಿವೇಶನದಲ್ಲಿ ಅತ್ಯಾಧುನಿಕ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸಮುಚ್ಚಯವನ್ನು ಒಳಗೊಂಡ ಕ್ರೀಡಾ ನಗರವನ್ನು (Sports City) ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು ಎಂದು ಘೋಷಿಸಲಾಗಿದೆ.<br><br>ಅದರಂತೆ, ಬೆಂಗಳೂರಿನಲ್ಲಿ ಕ್ರೀಡಾ ನಗರವನ್ನು (Sports City) ನಿರ್ಮಿಸುವ ಸಂಬಂಧ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ:<br><br>• ಬೆಂಗಳೂರಿನಲ್ಲಿ ಕ್ರೀಡಾ ನಗರವನ್ನು (Sports City) ನಿರ್ಮಿಸುವ ಸಂಬಂಧ ಯಲಹಂಕ ತಾಲ್ಲೂಕು ಹೆಸರುಘಟ್ಟ ಹೋಬಳಿ, ಮಾವಳ್ಳಿಪುರ ಗ್ರಾಮದ ಸ.ನಂ.8 ರಲ್ಲಿನ 100 ಎಕರೆ ನಿವೇಶನವನ್ನು ಗುರುತಿಸಲಾಗಿರುತ್ತದೆ.<br>• ಸದರಿ 100 ಎಕರೆ ನಿವೇಶನವು ಪ್ರಸ್ತುತ ಬಿ.ಬಿ.ಎಂ.ಪಿ. ಅಧೀನದಲ್ಲಿದ್ದು, ಘನ ತ್ಯಾಜ್ಯ ವಿಲೇವಾರಿ ಘಟಕವನ್ನಾಗಿ ಬಳಕೆ ಮಾಡಲು ಬಿ.ಬಿ.ಎಂ.ಪಿ. ಉದ್ದೇಶಿಸಿರುತ್ತದೆ.<br>• ಸದರಿ 100 ಎಕರೆ ನಿವೇಶನದ ಪೈಕಿ 40 ಎಕರೆ ನಿವೇಶನಕ್ಕೆ ಸಂಬಂಧಿಸಿದಂತೆ ಖಾಸಗಿ ವ್ಯಕ್ತಿಗಳು ವ್ಯಾಜ್ಯ ಹೂಡಿದ್ದು, ನ್ಯಾಯಾಲಯ ಪ್ರಕರಣ ದಾಖಲಾಗಿರುವ 40 ಎಕರೆ ನಿವೇಶನವನ್ನು ಹೊರತುಪಡಿಸಿ, ಉಳಿದ 60 ಎಕರೆ ನಿವೇಶನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ. ನಿವೇಶನ ಹಸ್ತಾಂತರಗೊಂಡ ನಂತರ ವಹಿವಾಟು ಸಲಹೆಗಾರರನ್ನು ನೇಮಿಸಿ, ವಿವರವಾದ ಯೋಜನಾ ವರದಿ ಸಿದ್ಧಪಡಿಸಿ, 'ಕ್ರೀಡಾ ನಗರ' ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು. |

**ವೈಎಸ್‌ಡಿ-ಇಬಿಬಿ/125/2024**

( ಸಿದ್ದರಾಮಯ್ಯ )
ಮುಖ್ಯಮಂತ್ರಿ